# ಶ್ರೀ ನರಸಿಂಹ ದೇವರ ಕೀರ್ತನೆಗಳು

## ೨೨೫

ಸ್ವಾಮಿ ನರಸಿಂಹ ಶರಣು (೧೦) ರಾಗ : ತಾಳ:

ಸ್ವಾಮಿ ನರಸಿಂಹ ಶರಣು
ಶ್ರೀಮಹಾ ಅಹೋಬಲನಿಲಯ ದೇವ ಶರಣು ॥ ಪ ॥

ಭವನಾಶಿನಿಯ ಕೂಲಭವನ ಭಟಪ್ರತಿಪಾಲ
ಭವಸಹಸ್ರಾಂಬಕರ ಭಯವಿದೂರ
ಭುವನಕದ್ಭುತ ಗಾತ್ರ ಭಜಕಜನಾತಪತ್ರ
ಭವಕರ್ದಮ ಶೋಷ ಬುಧರ ಪರಿತೋಷ ॥ ೧ ॥

ಅಣುರೇಣು ತೃಣ ವ್ಯಾಪ್ತ ಅಖಿಳರೊಳು ನಿರ್ಲಿಪ್ತ
ದನುಜ ಹಿರಣ್ಯಕಹರ್ತ ದೀನನಾಥ
ಕನಕಜಠರನ ಜನಕ ಕರುಣಾಂಕ ಕ್ರೂರಮುಖ
ಪುನೀತ ಶುಭಚಾರಿತ್ರ ಪ್ರಹ್ಲಾದಮಿತ್ರ ॥ ೨ ॥

ಪದುಮದೇವಿಯ ರಮಣ ಪ್ರದ್ವಿಷಾನ್ವಯದ ಮನ
ಮುದ ಶಾಂತ ಪರಿಪೂರ್ಣಮೂರ್ತಿ ಪುಣ್ಯ
ಪ್ರದನಾಮ ನವರೂಪ ಪತಂಗಾನಂತಪ್ರದೀಪ ನಿನ್ನ
ಪದವೆ ಗತಿ ಹೊರೆಯೆನ್ನ ಪ್ರಸನ್ವೆಂಕಟರನ್ನ ॥ ೩ ॥

## ೨೨೬

ಪ್ರಹ್ಲಾದವರದ ಭಯುಗಜಕೆಸಿಂಹ ಪರಮ (೧೦, ೧೩)

ರಾಗ : ಕಾಂಬೋಧಿ (ಭೂಪ) ; ತಾಳ : ಝಂಪೆ

ಪ್ರಹ್ಲಾದ ವರದ ಭಯುಗಜಕೆ ಸಿಂಹ ಪರಮ
ಆಹ್ಲಾದಪದವಿತ್ತು ಪೊರೆಯೊ ನರಸಿಂಹ ॥ ಪ ॥

ಹಿಂದೆ ಹಿರಣ್ಯಕನುದರದಲಿ ಜನಿಸಿ ಪ್ರಹ್ಲಾದ
ನೊಂದವನ ಬಾಧೆಯಲಿ ಮರಗಿ ಕೊರಗಿ
ಇಂದಿರೇಶ ಸಲಹೆನಲು ಗಾಢ ಸ್ತಂಭದಲೊದಗಿ
ಬಂದವನುದರ ಬಗಿದು ರುಧಿರವನು ಸವಿದೆ ॥ ೧ ॥

ಅಸುರ ಕೆಡೆಲದ ಕಂಡು ಅತಿ ಹರುಷದಿಂದ ತ್ರಿ –
ದಶರಂಬರದಿ ಪೂಮಳೆಗರೆಯಲು

Scanned with CamS

ಶುವೇಕ ಮಾನಸದಿ ಮರೆಹೊಕ್ಕು ಪೊಗಳುತಿರೆ
ಜಸಜಾಕ್ಷನ ಕರುಣದಿಂದವನ ಸಲಹಿದೆಯಾಗಿ ॥ ೨ ॥

ಪಲವು ಯೋನಿಗಳಲ್ಲಿ ತಿರುಗಿ ಬಳಲಿದೆನಯ್ಯ
ನಳಿನಾಕ್ಷ ನಿಮ್ಮ ಗುರುತವ ಕಾಣದೆ
ಇಳೆಯಲ್ಲಿ ದ್ವಿಜನಾಗಿ ಪುಟ್ಟಿ ತವ ಪದವಿಡಿದೆ
ಗಲಿಸು ಭವದುರಿತವ ಪ್ರಸನ್ವೆಂಕಟ ನೃಸಿಂಹ ॥ ೩ ॥

## ೨೨೭

**ಸಾಗಿ ಬಾ ಜಗದೇಕ ಧೊರೆಯ** (೨)++ ರಾಗ : ತಿಲಂಗ ; ತಾಳ : ಕೇಹರವಾ

ಸಾಗಿ ಬಾ ಜಗದೇಕಧೊರೆಯೆ ।
ಯೋಗಾನರಸಿಂಹಪ್ರಭುವೆ ॥ ಪ ॥
ಯೋಗಿಗಳರಸನೆ ಭಾಗವತಜನ –
ಸಾಗರ ನಿನ್ನಾಗಮನ ಕಾಯುತಿದೆ ॥ ಅ ॥

ಭಸಿತಚಂದನತಿಲಕಾಲಂಕೃತ ।
ಶಶಿಸೂರ್ಯಾಭರಣ ತೋರಣ ॥
ಭೂಸುರರೆಲ್ಲ ಸುಭಾವಸ್ವರದಲಿ ।
ಭಾಸಿಸುತಿರೆ ನಿಮ್ಮ ನಾಮವಿಶೇಷ ॥
ವಾಸುಕೀಶಯನ ವಿಶೇಷರಥವನೇರಿ ।
ದಾಸವರ್ಗದಭಿಲಾಷೆ ನೀಡು ಬಾ ॥ ೧ ॥

ಪ್ರತ್ಯಹಚರ ಪ್ರಪತ್ತಿ ಭಕುತಿ ಪಥ ।
ಸತ್ಯಂವದ ಧರ್ಮಾಚರಣೆ ಸುಖ ॥
ನಿತ್ಯನಿರಂತರ ಮುಕುತಿಜ್ಞಾನಾದಿ ।
ಭೃತ್ಯರಿಗಿತ್ತು ಸಲಹೋ ಶ್ರೀನಿಧಿ ॥
ಸತ್ಯದೇವ ಪಿತ ಸರ್ವೋತ್ತಮ ನೀ ।
ಪ್ರತ್ಯಕ್ಷವಾಗಿ ಬಾ ಈ ರಥದ ಮಧ್ಯದಲಿ ॥ ೨ ॥

ಸಾಸಿರನಾಮಂಗಳ ಘೋಷಣೆ ಕೂಗುತ ।
ಲೇಸಾಗಿ ತಾಲ ಮದ್ದಳೆ ಕಂಸಾಳೆ ಮೊಳಗಿರೆ ॥
ಅಸುರನ ವರಿಸಿ ಪ್ರಲ್ಹಾದನ ಸಲುಹಿದಾ ।

++ ವಿ.ಸೂ. : ಕೀ. ಕ್ರ ಸಂ. ೨೨೭, ಈ ಕೀರ್ತನೆಯನ್ನು ಇತ್ತೀಚಿಗೆ ಶ್ರೀ ಲಕ್ಷ್ಮೀಕಾಂತ ಪಾಟೀಲರು ಶೋಧಿಸಿದ್ದಾರೆ. ಹಸ್ತಪ್ರತಿಯ ಬಗ್ಗೆ ಹೆಚ್ಚಿನ ಸಂಶೋಧನೆ ಆಗಬೇಕು.

Scanned with CamS

ಶೇಷಶಯನ ನಿನ್ನಾಸರೆ ನೀಡು ಬಾ ।
ದೋಷ ವಿವರ್ಜಿತ ದಾಸರ ರಕ್ಷಕ ।
ಶ್ರೀ ಶ್ರೀ ಶ್ರೀ ಪ್ರಸನ್ವೇಂಕಟನಾಯಕಾ ॥ ೩ ॥

## ೨೨೮

**ನಾರಸಿಂಹನ ಭಜಿಸಿ ಭವ ಭೀತರು** [೧೧]

ನಾರಸಿಂಹನ ಭಜಿಸಿ ಭವ ಭೀತರು ।
ತೋರುವಡಗುವ ವಿಭವ ಸುಖಕೆ ನಡುಗೀ ॥ ಪ ॥

ದಾವ ಭವವಾರಿಧೀಯೊಳುಂಡುಟ್ಟು ಸತಿ ಸುತರು ।
ಜೀವದೊಲ್ಲಭರೆಂದು ಕೆಡುವರೊ ಕಣಾ ।
ದಾವ ನೀರಟ್ಟಿಸಲದೆ ಮಡುವಿಲಿಹ ಜಲ ಚ –
ರಾವಳಿಯ ಬಳಲಿಕಿಯ ನೋಡಿ ನಡುಗೀ ॥ ೧ ॥

ಘೋರಾಟವಿಗೆ ಸಮವಸಾರ ಸಂಸಾರದೊಳು ।
ಭೂರಿ ಸುಖವೆಂದು ಮೂರ್ಖರು ಕೆಡುವರು ।
ಕ್ರೂರ ಹುಲಿ ಚೋರ ನಿಭ ತನು ಸಂಬಂಧಿಗಳ ಧರ್ಮ ।
ಸೂರಿಗಾರರ ಸುಲಿಗಿ ಗಂಜಿ ನಡುಗೀ ॥ ೨ ॥

ಸ್ವಚ್ಛೋದಕದ ಥೆರೆ ಮರೀಚಕಾ ಜಲಕೆ ಸಮ
ಕುಚ್ಛಿತ ಶೃತಿಯ ನಂಬಿದವ ಪಾಮರಾ ।
ನಿಚ್ಚ ನೀರಿಡಿಸೋಡಿ ಪ್ರಸನ್ನ ವೇಂಕಟ ಪತಿಯ ।
ಸುಚ್ಛಾಯ ಬಿಟ್ಟೋರಲುವನಿಗೆ ನಡುಗೀ ॥ ೩ ॥

## ೨೨೯

**ವೃಂದಾರಕ ವಂದ್ಯಾ ಯದುಕುಲಾಂಬುಧಿಚಂದ್ರಾ** [೧೦,೧೩] **ರಾಗ ಕಲ್ಯಾಣಿ ; ತಾಳ : ಆದಿ**

ವೃಂದಾರಕ ವಂದ್ಯಾ ಯದುಕುಲಾಂಬುಧಿ ಚಂದ್ರಾ ॥ ಪ ॥

ಮೃಗಮದ ತಿಲಕ ವಿರಾಜಿತ ಖಳಶೂಲ ॥
ಮೃಗ ನರರೂಪ ವಿಧೃತ ಸುಗುಣ ವಿಶಾಲಾ ॥ ೧ ॥

ಖಗಾಸನ ಕಮಲಾ ರಮಣ ಕಲಿನಾಶ ॥
ಖಗ ಮುಕ್ತಿದಾಯಕ ಕನಕ ನಗೇಶಾ ॥ ೨ ॥

ಮಣಿಮಯ ಭೂಷಣಾಮಿತ ಶ್ರುತ್ಯಚಿಂತಾ ॥
ಮಣಿ ಕಲ್ಪ–ಕುಜಧೇನು ಮಹಿಮಾನಂತಾ ॥ ೩ ॥

Scanned with CamS

ಸ್ವಾಮಿ ಪುಷ್ಕರ ವರ ಸನ್ನಿಧಿ ಸದನ ॥
ಸ್ವಾಮಿ ವರಾಹ ಹಿರಣ್ಯಾಂಬಕ ಮಥನ ॥ ೪ ॥

ರಾಕೇಂದು ಕೋಟಿ ಪ್ರಕಾಶ ಕಲುಷ ನಿ –
ರಾಕೃತ ನಮೋ ಶ್ರೀ ಪ್ರಸನ್ವೆಂಕಟೇಶಾ ॥ ೫ ॥

## ತೊರವಿ ನರಸಿಂಹ ದೇವರ ಕೀರ್ತನೆ

## ೨೫೦

**ತೊರವಿ ಪುರನಿವಾಸ ನರಸಿಂಹ ನೀ** (೧೦) ರಾಗ : ತಾಳ :

ತೊರವೆಪುರನಿವಾಸ ನರಸಿಂಹ ನೀ
ಪೊರೆಯೊ ಭಕ್ತರ ಭಯಗಜಸಿಂಹ ॥ ಪ ॥

ಅರಿವರಾರಯ್ಯ ನಿನ್ನ ಮಹಿಮೆಯ
ಸರಸಿಜಭವ ಭವ ಸುರವರ ಅಹಿ ಕಿನ್ನರ
ವರ ಮುನಿವರ ನರವರವಂದ್ಯ ॥ ಅ. ಪ. ॥

ಹಿರಣ್ಯಕನೆಂಬ ದೈತ್ಯ ಮಹೀತಳದಿ ವಿಧಿ
ಪರವರದಲಿ ಬಲುಸೊಕ್ಕಿ ಅಂದು
ಪರಮ ಭಾಗವತ ಪ್ರಹ್ಲಾದನಿಗೆ
ಪರಿಪರಿದುರಿತವ ಮರಳಿ ಮರಳಿ ಭಯಂ
ಕರವನು ಚರಿಸಲು ನೆರೆಮೊರೆಯಿಡಲು ॥ ೧ ॥

ತರಳಗಂಜಿಸಿ ನಿನ್ನ ದೊರೆಯ ತೋರೊ ಎನಲು
ಸರವಭೂತ ಭರಿತಾನಂತನೀಗ
ಅರಸಿದರೀ ಕಂಬದೊಳಿಹನೆನಲು
ಮೊರೆ ಮೊರೆದೇಳುತ ಸರಸರನೊದೆಯಲು
ಬೆರಬೆರದ್ರೋಷದಿ ವರನರಹರಿಯೆ ॥ ೨ ॥

ಚಿಟಿಲು ಚಿಟಿಲು ಭುಗಿಭುಗಿಲೆನುತ ಪ್ರ
ಕಟಿಸಿ ದೈತ್ಯನುದರವನು ಸೀಳಿ
ತ್ರುಟಿಯೊಳು ಕರುಳಮಾಲೆಯ ಧರಿಸಿ
ಶಠನ ವಧಿಸಿ ನಿಜಭಟನ ಪೊರೆದ ಜಗ
ಜಠರ ಪ್ರಸನ್ನವೆಂಕಟ ನರಸಿಂಹ ॥ ೩ ॥

Scanned with CamS